ಉಡುಪಿ ಪುರಸಭೆಯನ್ನು ನಗರ ಸಭೆಯನ್ನಾಗಿ ಪರಿವರ್ತನೆ

561 - ಶ್ರೀ ಯು.ಆರ್. ಸಭಾಪತಿ ಶಾಸಕರು (ಉಡುಪಿ) : ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ - ಕರ್ನಾಟಕ ಅಭಿವೃದ್ಧಿ ಮಂದಳಿ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಪುರಸಭೆಯನ್ನು ನಗರಸಭೆಯನ್ನಾಗಿ ಪರಿವರ್ತಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ

ಆ) ಇದ್ದಲ್ಲಿ ಆ ಕುರಿತಾಗಿ ಜರಿಗಿಸಿದ ಕ್ರಮಗಳೇನು?

ಇ) 9.600 ಕಿ.ಮಿ. ಪ್ರದೇಶಗಳನ್ನು ವಿಸ್ತೀರ್ಣ ಹೊಂದಿರುವ ಉಡುಪಿ ಪುರಸಭೆಗೆ ಹೊಂದಿಕೊಂಡಿರುವ ಮಲ್ಪೆ, ಪುತ್ತೂರು, ಶಿವಳ್ಳಿ, ಮಣಿಪಾಲ, ಹೆರ್ಗಾ, 76 ಬಡಗೆಬಟ್ಟು (ಬೈಲೂರು)ಗಳನ್ನು ಸೇರಿಸಿ ಉಡುಪಿ ನಗರ ಸಭೆಯ ರಚನೆಯ ಬಗ್ಗೆ ಸರ್ಕಾರದವರು ಮಂಜೂರಾತಿಯನ್ನು ನೀಡಿರುವರೇ?

ಈ) ಮಂಜೂರಾತಿ ಪಡೆದಿದ್ದಲ್ಲಿ ಉಡುಪಿ ನಗರ ಸಭೆಯ ಘೋಷಣೆಯನ್ನು ಸರ್ಕಾರದವರು ತುರ್ತಾಗಿ ಮಾಡಿ ಆ ಪ್ರದೇಶದ ಅಭಿವೃದ್ಧಿಗೆ ಮುಂದಾಗುವರೇ?

ಉ) ಮಲ್ಪೆ, ಪುತ್ತೂರು, ಶಿವಳ್ಳಿ (ಮಣಿಪಾಲ) ಹೆರ್ಗಾ (ಪರ್ಕಳ), 76 ಬಡಗೆಬಟ್ಟು (ವೈಲೂರು) ಈ ಪ್ರದೇಶಗಳನ್ನು ಅಧಿಸೂಚಿತ ಪ್ರದೇಶಗಳೆಂದು ಘೋಷಣೆಯನ್ನು ಸರ್ಕಾರದವರು ಘೋಷಣೆ ಮಾಡಿದ್ದರೂ ಕೂಡ ಸಂಬಂಧಪಟ್ಟ ಅಧಿಕಾರಿಗೆ 1964ರ ನಗರಸಭೆ ಕಾಯಿದೆಯನ್ವಯ ಅಧಿಕಾರ ನೀಡದೇ ಇರಲು ಕಾರಣಗಳೇನು?

ಊ) ಇನ್ನಾದರೂ ವಿಳಂಬವಿಲ್ಲದೆ ಈ ಪ್ರದೇಶಗಳನ್ನು ಉಡುಪಿ ವ್ಯಾಪ್ತಿಗೆ ಸೇರಿಸಿ ಉಡುಪಿ ನಗರಸಭೆಯನ್ನು ಸರ್ಕಾರ ರಚಿಸಲು ಮುಂದಾಗುವುದೇ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ, ಕಾಡಾ, ಹೈದರಾಬಾದ್- ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಸಂವಿಧಾನದ (74ನೇ ತಿದ್ದುಪಡಿ) ಕಾಯ್ದೆ 1992ಕ್ಕನುಗುಣವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ಆ) 'ಅ' 'ಆ' 'ಇ' ಗಳ ಪ್ರಕಾರ ಒಮ್ಮೆ ಕ್ರಮ ತೆಗೆದುಕೊಂಡ ಬಳಿಕ 'ಈ' ಬಗ್ಗೆ ಕ್ರಮ ಜರುಗಿಸಲಾಗುವುದು.

ಇ) ಕರ್ನಾಟಕ ಮುನ್ಸಿಪಾಲಿಟಿ ಕಾಯ್ದೆ 1964ರನ್ವಯ ಈ ಪ್ರದೇಶಗಳ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗೆ ವಹಿಸಲಾಗಿದೆ.

ಈ) ಸಂವಿಧಾನದ (74ನೇ ತಿದ್ದುಪಡಿ) ಕಾಯ್ದೆ 1992 ಕ್ಕನುಗುಣವಾಗಿ ಕ್ರಮ ತೆಗೆದು ಕೊಳ್ಳಲಾಗುವುದು.

ಮಂಗಳೂರು ನಗರಕ್ಕೆ ಸಮಗ್ರ ನೀರು ಸರಬರಾಜು

818 - ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991 ರಿಂದ ಬಾಕಿ ಇರುವ ಮಂಗಳೂರು ಮಹಾನಗರ ಪಾಲಿಕೆಯ ಸಮಗ್ರ ನೀರು ಸರಬರಾಜು ಯೋಜನೆಯನ್ನು ಜೂನ್ 1995ರ ಒಳಗೆ ಪೂರ್ಣಗೊಳಿಸಿ ಮಂಗಳೂರು ಮಹಾನಗರ ಪಾಲಿಕೆಯ ನೀರು ಸಮಸ್ಯೆಯನ್ನು ಇತ್ಯರ್ಥಗೊಳಿಸಲು ರಾಜ್ಯ ಸರ್ಕಾರದವರು ಯೋಜಿಸುವರೆ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :